## ಸಮಿತಿ ರಚನೆಗೆ ಭಯವೇಕೆ?

**-ಕವಿತಾ ಲಂಕೇಶ್, 'ಫೈರ್' ಅಧ್ಯಕ್ಷೆ**



ಚಿತ್ರರಂಗದಲ್ಲಿನ ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದಂತೆ 'ಹೇಮಾ ಸಮಿತಿ' ಮಾದರಿಯ ಸಮಿತಿಯ ಅಗತ್ಯ ಹಿಂದಿನಿಂದಲೂ ಇತ್ತು. ಆದರೆ ಸಮಿತಿ ರಚನೆ ಬಗ್ಗೆ ಚಲನಚಿತ್ರ ವಾಣಿಜ್ಯ ಮಂಡಳಿ ಪ್ರಯತ್ನ ನಡೆಸಿಲ್ಲ. ವಾಣಿಜ್ಯ ಮಂಡಳಿಯಲ್ಲಿಯೇ ಒಂದು 'ಸಂಧಾನ ಸಮಿತಿ' ಇದೆ. ಆದರೆ, ಓರ್ವ ಮಹಿಳೆ ದೂರಿನೊಂದಿಗೆ ಬಂದಾಗ, ಒಪ್ಪಂದ ಮಾಡುವುದು, ಸಂಧಾನ ಮಾಡುವುದು 'ಪರಿಹಾರ' ಎನಿಸಿಕೊಳ್ಳುವುದಿಲ್ಲ. ಇದಕ್ಕೆಂದೇ ವಿಶೇಷ ಸಮಿತಿ ಇದ್ದರೆ ಸರಿಯಾಗಿ ಕಾರ್ಯ ನಿರ್ವಹಿಸುತ್ತದೆ; ಮಹಿಳೆಯರ ಸುರಕ್ಷತೆ ಬಗ್ಗೆ ಕೆಲಸ ಮಾಡುತ್ತದೆ ಎಂಬುದು ನನ್ನ ನಂಬಿಕೆ.

ಲೈಂಗಿಕ ದೌರ್ಜನ್ಯ ಮಾತ್ರವಲ್ಲದೆ, ಸಿನಿಮಾರಂಗದಲ್ಲಿ ಮಹಿಳೆಯರಿಗೆ ದೊರಕಬೇಕಾದ ಸೌಲಭ್ಯಗಳ ಕುರಿತು ಮಾತನಾಡಬೇಕಿದೆ. ಮಹಿಳೆಯರು ಕೆಲಸ ಮಾಡಬೇಕಾದ ಜಾಗದಲ್ಲಿ 'ಪಾಶ್' ಕಮಿಟಿ ಇರಬೇಕು ಎಂಬುದು ನಿಯಮ. ಆದರೆ ಇಷ್ಟು ವರ್ಷಗಳಲ್ಲಿ ಸಿನಿಮಾರಂಗದಲ್ಲಿ ಪಾಶ್ ಸಮಿತಿ ರೂಪುಗೊಂಡಿಲ್ಲ. ವಾಣಿಜ್ಯ ಮಂಡಳಿ ಪ್ರಕಾರ, ಮಹಿಳೆಯರಿಂದ ಯಾವುದೇ ದೂರು ಬರುತ್ತಿಲ್ಲ. ದೂರು ನೀಡಬೇಕೆಂದರೂ ಎಲ್ಲಿ ಹೋಗಿ ನೀಡಬೇಕು, ಯಾರಿಗೆ ನೀಡಬೇಕು ಎಂದು ಗೊತ್ತಾಗದೇ ಹಿಂದೇಟು ಹಾಕುವವರು ತುಂಬಾ ಜನ ಇದ್ದಾರೆ.

ವಾಣಿಜ್ಯ ಮಂಡಳಿಯಲ್ಲಿ ಕೆಲವರು 'ಸಮಿತಿ ಬೇಡವೇ ಬೇಡ, ಸಮಿತಿ ರಚನೆಯಾದರೆ ಸಿನಿಮಾರಂಗ ನಾಶ ಆಗಿಬಿಡುತ್ತೆ' ಎಂದು ಹೇಳುತ್ತಿದ್ದಾರೆ. ಸಮಿತಿ ರಚನೆ ಮಾಡಲಿ ಎಂದರೆ ಭಯ ಏಕೆ? ಕೋಪ ಏಕೆ? ಸುಳ್ಳು ಆರೋಪಗಳು ಕೇಳಿಬರುತ್ತವೆ ಎಂಬುದೇ ಕಾರಣವಾಗಿದ್ದರೆ, ಅದನ್ನು ಸಾಬೀತು ಮಾಡಲೂ ಸಮಿತಿ ಇದ್ದೇ ಇರುತ್ತದಲ್ಲ ಎನ್ನುವ ಪ್ರಶ್ನೆ ನಮ್ಮದು. ನಾವೇನು ಪುರುಷರ ವಿರೋಧಿಗಳಲ್ಲ. ಪುರುಷರಿಗೂ ಅನ್ಯಾಯ ಆದ ಅಪರೂಪದ ಪ್ರಕರಣಗಳು ಇವೆ. ಆದರೆ ಮಹಿಳೆಯರ ಮೇಲೆ ದೌರ್ಜನ್ಯವಂತೂ ನಡೆಯುತ್ತಲೇ ಇದೆ.

'ಫೈರ್' ಸಕ್ರಿಯವಾಗಿದ್ದಾಗ ಸುಮಾರು ದೂರುಗಳು ಬಂದವು. ನಿರ್ಮಾಪಕರು–ನಿರ್ದೇಶಕರು ನಟಿಯರ ನಂಬರ್ ತೆಗೆದುಕೊಂಡು ಕಿರುಕುಳ ಕೊಡುವಂಥ ದೂರುಗಳು ಇದ್ದವು. ಆದರೆ ಅವರೆಲ್ಲ ಯಾರಿಗೆ ಹೋಗಿ ದೂರು ನೀಡುವುದು? ನಮ್ಮದೇ ಒಂದು ಸಂಬಂಧಿತ ಸಂಸ್ಥೆ ಎಂದಿಲ್ಲ. ನಾವು ಸಮಸ್ಯೆ ಬಗೆಹರಿಸಲು ಹೋದರೆ ಅದೇ ಸಮಸ್ಯೆಯಾಗುತ್ತದೆ. ನ್ಯಾಯಯುತವಾಗಿ ಒಂದು ಸಂಸ್ಥೆ ಅಥವಾ ಅಂಗ ಇದ್ದರೆ, ಅವರಿಗೆ ಅಧಿಕಾರ ಇರುತ್ತದೆ. ನಾವು ಬೆಂಬಲ ನೀಡಬಹುದು. ಸಮಿತಿ ರಚನೆಯಾದರೆ, ಅದಕ್ಕೆ ಪ್ರಶ್ನೆ ಮಾಡಲು ಹಕ್ಕಿರುತ್ತದೆ. ಹಾಗಾಗಿಯೇ ಸಮಿತಿ ರಚನೆಗೆ ಒತ್ತಾಯಿಸುತ್ತಿದ್ದೇವೆ.

ಮಹಿಳೆ ದನಿ ಎತ್ತಿದರೆ ಅದಕ್ಕೆ ವಿರೋಧಗಳು ತುಂಬಾ ಬರುತ್ತವೆ. ಅವರನ್ನೇ ವಿಕ್ಟಿಮೈಸ್ ಮಾಡುತ್ತಾರೆ. ಅವರ ಇಮೇಜ್ ಹಾಳುಮಾಡುವ ಪ್ರಯತ್ನಗಳು ನಡೆಯುತ್ತವೆ. ಎಲ್ಲರಿಗೂ ಭಯ ಇರುತ್ತದೆ. ಈ ವಿಷಯದಲ್ಲಿ ಮುಂದೆ ಬರಲು ಕೆಲವು ನಟಿಯರು ಧೈರ್ಯ ಮಾಡಿದ್ದಾರೆ. ಅವರಿಗೆ ಪರಿಣಾಮ ಎದುರಿಸುವ ಶಕ್ತಿ ಇದೆ. ಆದರೆ, ಹೊಸಬರು ಹಾಗೂ ಸಿನಿಮಾರಂಗದೆಡೆಗೆ ಆಸೆಯಿಂದ ಬಂದವರು 'ಸಿನಿಮಾರಂಗ ಇರುವುದೇ ಈ ರೀತಿ' ಎಂದು ತಪ್ಪು ತಿಳಿದುಕೊಳ್ಳುತ್ತಾರೆ. ಹೀಗಾಗಬಾರದು.

ಮುಂದಿನ ಪೀಳಿಗೆಯವರು ಬರಲಿ, ಮಾತಾಡಲಿ, ಅವರ ಸವಾಲುಗಳನ್ನು ಹೇಳಿಕೊಳ್ಳಲಿ. ಸಮಿತಿ ಇದ್ದರೆ ಪರಿಹಾರವೂ ನ್ಯಾಯಯುತವಾಗಿರುತ್ತದೆಂಬ ನಂಬಿಕೆ ನಮ್ಮದು. ■



ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸುವಂತೆ ಸರ್ಕಾರದ ಮುಂದೆ ಬೇಡಿಕೆ ಇಟ್ಟಿದ್ದಾರೆ.

ಚಿತ್ರೋದ್ಯಮದಲ್ಲಿನ ಮಹಿಳೆಯರ ಸ್ಥಿತಿಗತಿ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಸಮಿತಿ ರಚನೆಯಾಗಬೇಕು ಎನ್ನುವ ಬೇಡಿಕೆಗೆ ಉದ್ಯಮದಲ್ಲಿ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿರುವುದು ಕುತೂಹಲಕರ. ಸಮಿತಿ ರಚನೆಗೆ ಸಂಬಂಧಿಸಿದಂತೆ 'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ' ಒಮ್ಮತಕ್ಕೆ ಬರಲು ವಿಫಲವಾಗಿದೆ. ಸಮಿತಿ ರಚನೆಯಿಂದ ಚಿತ್ರರಂಗ ತೊಂದರೆಗೆ ಸಿಲುಕಿಕೊಳ್ಳಲಿದೆ ಎಂಬ ಮಾತನ್ನೂ ಆಡಿದೆ. 'ಫೈರ್ ಸಂಸ್ಥೆ ಚಿತ್ರೋದ್ಯಮದ ಅಧಿಕೃತ ಸಂಸ್ಥೆಯಲ್ಲ' ಎಂದು ಹೇಳಿರುವ ವಾಣಿಜ್ಯ ಮಂಡಳಿ, ಚಿತ್ರೋದ್ಯಮದ ಆಂತರಿಕ ವಿಷಯಗಳಲ್ಲಿ 'ಫೈರ್' ಹಸ್ತಕ್ಷೇಪ ಮಾಡುತ್ತಿದೆ ಎನ್ನುವ ಅರ್ಥದಲ್ಲಿ ಮಾತನಾಡುತ್ತಿದೆ. 'ಫೈರ್' ಸಂಸ್ಥೆಯನ್ನು ಪ್ರತಿನಿಧಿಸುತ್ತಿರುವವರು ಚಿತ್ರರಂಗಕ್ಕೆ ನೀಡಿರುವ ಕೊಡುಗೆಯೇನು ಎಂದೂ ಕೆಲವರು ಪ್ರಶ್ನಿಸಿದ್ದಾರೆ. ವಾಣಿಜ್ಯ ಮಂಡಳಿ ಸೇರಿದಂತೆ ಚಿತ್ರೋದ್ಯಮದ ಹಲವರಿಗೆ ಯಥಾಸ್ಥಿತಿ ಕಾಪಾಡಿಕೊಂಡು ಬರುವುದರಲ್ಲಿಯೇ ಆಸಕ್ತಿ ಇರುವಂತಿದೆ.

ಸಮಿತಿ ರಚನೆಯ ಬಗ್ಗೆ ವಾಣಿಜ್ಯ ಮಂಡಳಿ ನಿರಾಸಕ್ತಿ ವ್ಯಕ್ತಪಡಿಸಿರುವ ಸಂದರ್ಭದಲ್ಲೇ— ಕನ್ನಡ ಚಿತ್ರರಂಗದ ಮಹಿಳಾ ಕಲಾವಿದರು, ತಂತ್ರಜ್ಞರು ಹಾಗೂ ಕಾರ್ಮಿಕರ ರಕ್ಷಣೆಗಾಗಿ 'ಲೈಂಗಿಕ ದೌರ್ಜನ್ಯ ತಡೆ' (ಪಾಶ್) ಸಮಿತಿಯನ್ನು ಶೀಘ್ರದಲ್ಲಿಯೇ ರಚಿಸಬೇಕೆಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಸೂಚನೆ ನೀಡಿದ್ದಾರೆ. ಆದರೆ, ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿಯೇ ಸಮಿತಿ ರಚನೆಗೊಳ್ಳಬೇಕು ಎನ್ನುವುದು 'ಫೈರ್' ಒತ್ತಾಯ.

ಕನ್ನಡ ಚಿತ್ರೋದ್ಯಮದಲ್ಲಿನ ಮಹಿಳೆಯರ ಸ್ಥಿತಿಗತಿ ಹಾಗೂ ಸುರಕ್ಷತೆಗೆ ಸಂಬಂಧಿಸಿದಂತೆ ಸಮಿತಿ ರಚನೆ ಬೇಡವೆ? ಬೇಡ ಎನ್ನುವುದಾದರೆ ಯಾಕೆ ಬೇಡ? ಈ ಪ್ರಶ್ನೆಗಳೊಂದಿಗೆ 'ಸುಧಾ' ಚಿತ್ರೋದ್ಯಮದ ಕೆಲವರನ್ನು ಮಾತನಾಡಿಸಿತು. ಅವರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ಕನ್ನಡ ಚಿತ್ರೋದ್ಯಮದ ಮನಸ್ಥಿತಿಯನ್ನು ಓದುಗರೇ ಅಂದಾಜು ಮಾಡಿಕೊಳ್ಳಬಹುದು.